**KARNATAKA LOKAYUKTA**

No. UPLOK-2 /DE/720/2017/ARE-16
*(Encl: Recommendation & original Report of Inquiry Officer with connected records)*

Dr.B.R.Ambedkar Veedhi,
Multi Storied Building,
Bengaluru,
dated: 13/12/2019.

**To,**

Smt. Uma Mahadevan, IAS,
Principal Secretary to Government,
Rural Development &
Panchayath Raj Department,
M.S.Building,
Bengaluru – 560001.

Respected Madam,

**Sub :** Departmental inquiry against, Smt.R.M.Kalavathi, Panchayth Development Officer, M.Gopahalli Grama Panchayath, Ramanagara Taluk and Dist-reg.

**Ref :** Government Order No. ಗ್ರಾಅಪ 411 ಗ್ರಾಪಂಕಾ 2017 ಬೆಂಗಳೂರು ದಿನಾಂಕ : 19.05.2017

* * *

With Reference to the above, I am directed to forward herewith the recommendation of Hon'ble Uplokayukta, State of Karnataka, dated 03.12.2019 along with the report of inquiry Officer and relevant records as noted below:

# INDEX


| Sl. No. | Particulars of Documents | Page Nos. |
|---|---|---|
| | Recommendation dated 12/12/2019 of Hon'ble Upalokayukta along with inquiry report | One sealed cover |
| File 1 | Order Sheet File (Original). | 1-11 |
| File 2 | **Documents containing :** | |
| | I. 12(3) report of Hon'ble Upalokayukta-II, dated: 12/04/2017 (xerox). | 12-15 |
| | II. Government Order No. ಗ್ರಾಅಪ 411 ಗ್ರಾಪಂಕಾ 2017 ಬೆಂಗಳೂರು, ದಿನಾಂಕ: 19/05/2017 (xerox). | 16-18 |
| | III. Nomination order No: Uplok-2/DE/720/ 2017 dated: 30/05/2017 of Hon'ble Upalokayukta-II, Bangalore (Xerox) | 19-20 |
| | IV. Served copy of Articles of charges dtd.14/8/2017, 5 pages (Original) | 21-25 |
| | V. First Oral Statement of DGO dtd:3/10/2017 (Original) | 26 |
| | VI.Written statement of DGO dt.27/9/2017 , 4 sheets (original) | 27-30 |
| | VII. Second oral statement of DGO dt.23/8/2019, (original) | 31 |
| | VIII. Written arguments of DGO dt.22/10/2019, 3 pages( original) | 32-36 |
| File 3 | **Witness examined on behalf of the Disciplinary Authority** | |
| | **PW-1**: Sri.Dhananjaya,R dt.17/06/2019, 3 pages (Original) | 37-39 |
| | **PW-2:** Sri.K.S.Manjunath dt.23/08/2019, 3 pages (original) | 40-42 |
| | **Documents marked on behalf Disciplinary Authority (Ex.P1 to Ex.P.8)** | |
| | **Ex.P-1:** Complaint of Sri.Dhananjaya R. Dt.23/04/2015 (original) | 43 |
| | **Ex.P-2:** Complaint in form No.1 of Sri. | 44-45 |

| | | |
|---|---|---|
| | Sri.Dhananjaya R. (original) | |
| | **Ex.P-3:** Complaint in form No.II of Sri.Dhananjaya R. Dt.23/04/2015 (original) | 46 |
| | **Ex.P-4:** Letter of complainant dt.23/12/2016 (original) | 47 |
| | **Ex.P-5:** letter of CEO, Ramanagara, Zilla Panchayath dt.30/4/2015 (original) | 48-49 |
| | **Ex.P-6**: Investigation report of CEO, Ramanagara Zilla Panchayath, dt.30/4/2015(original) | 50-51 |
| | **Ex.P.7:** Copy of spot mahazar, 2 pages (Xerox) | 52-53 |
| | **Ex.P.8:** Letter of CEO, ZP, Ramanagar dt.24/7/2015 , 2 sheets (original) | 54-55 |
| | **Witness examined on behalf of the DGO** | |
| **File 4** | **DW-1:** Smt.M.R.Kalavathi dt.10/10/2019, 6 pages (Original) | 56-61 |
| | **Documents marked on behalf of the Disciplinary Authority** | |
| | **Ex.D-1:** Copy of Estimation regarding work, 3 sheets , (Xerox) | 62-64 |
| | **Ex.D-2:** Copy of Work order dt.23/4/2014(Xerox) | 65 |
| | **Ex.D-3:** Copy of Form-9, Workers list, 2 pages (xerox) | 66-67 |
| | **Ex.D-4:** Copy of notice to beneficiaries, 11 sheets (Xerox) | 68-78 |
| | **Ex.D-5:** copy of Application of workers for work, 2 pages (xerox) | 79-80 |
| | **Ex.D-6:** copy of Muster role, 3 sheets (xerox) | 81-83 |
| | **Ex.D-7:** copy of list of wages paid to workers through IMS, 3 sheets (xerox) | 84-86 |
| | **Ex.D-8:** Copy of NMR(xerox) | 87 |
| | **Ex.D-9:** Copy of measurement book, 2 pages(xerox) | 88-89 |
| | **Ex.D-10:** copy of NMR showing bill made to partly executed of work (xerox) | 90 |
| | **Ex.D-11:** copy of measurement book(xerox) | 91 |
| | **Ex.D-12:** copy of IMS workers list(xerox) | 92 |
| | **Ex.D-13:** Copy of 2nd bill of NMR(xerox) | 93 |
| | **Ex.D-14:** Copy of form-9,notice to beneficiaries, 3 sheets (Xerox) | 94 |

| | | |
|---|---|---|
| | **Ex.D-15:** Copy of form-08,notice to beneficiaries, 3 sheets (Xerox) | 95-97 |
| | **Ex.D.16:** copy of form-6 submitted by workers, (Xerox) | 98 |

Kindly acknowledge the receipt of the above said documents.

Yours faithfully,

C. Chandramallegowda 13/12

(**C.Chandramallegowda**)
Registrar,
Karnataka Lokayukta,
Bengaluru.

Copy to the Addl.Registrar of Enquiries-16, Karnataka Lokayukta, Bengaluru., for information and further necessary action.

**KARNATAKA LOKAYUKTA**

No.Uplok-2/DE-720/2017/ARE-16

Multi-storeyed Building,
Dr.B.R. AmbedkarVeedhi,
Bengaluru, dt.12.12.2019.

## RECOMMENDATION

Sub:- Departmental inquiry against Smt. R.M.Kalavathi, Panchayath Development Officer, M.Gopahalli Grama Panchayath, Ramanagara Taluk and District– reg.

Ref:- 1) Government Order No. ಗ್ರಾಅಪ/411/ಗ್ರಾಪಂಕಾ/2017, Bangalore dated: 19.5.2017.

2) Nomination order No. UPLOK-2/DE/720/2017 dated 30.5.2017 of Upalokayukta-2, State of Karnataka, Bangalore.

3) Inquiry report dated 10.12.2019 of Additional Registrar of Enquiries-16, Karnataka Lokayukta, Bengaluru.

~~~~~

The Government by its order dated 19.5.2017 initiated disciplinary proceedings against Smt. R.M.Kalavathi, Panchayath Development Officer, M.Gopahalli Grama Panchayath, Ramanagara Taluk and District,[hereinafter referred to as Delinquent Government Officer, for short as 'DGO'] and entrusted the departmental inquiry to this Institution.

2. This Institution by Nomination Order No. UPLOK-2/DE/720/2017 dated 30.5.2017 nominated Additional Registrar of Enquiries-11, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to
~~~~~

have been committed by her. Subsequently by order No. Uplok 1 & 2/DE/Transfers/2019 dated 7.2.2019 ARE-16 was re-nominated to continue the said enquiry.

3. The DGO - Smt. R.M.Kalavathi, Panchayath Development Officer, M.Gopahalli Grama Panchayath, Ramanagara Taluk and District was tried for the following charges:-

> "ಆಪಾದಿತ ಸರ್ಕಾರಿ ನೌಕರರಾದ ಶ್ರೀಮತಿ ಆರ್.ಎಂ.ಕಲಾವತಿ ಆದ ನೀವು, ರಾಮನಗರ ಜಿಲ್ಲೆ ಮತ್ತು ತಾಲ್ಲೂಕಿನ ಎಂ.ಗೋಪಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿಕೊಂಡಿದ್ದ ಅವಧಿಯಲ್ಲಿ, ನರೇಗಾ ಕಾರ್ಯಕ್ರಮದಡಿ ದೂರುದಾರರಾದ ಆರ್.ಧನಂಜಯ್ಯರವರು ಮೀನು ಸಾಕಾಣಿಕೆ ಹೊಂಡವನ್ನು ಭಾಗಶ: ನಿರ್ವಹಿಸಿದ್ದು, ಈ ಸಂಬಂದ ಹಣವನ್ನು ತಾಂತ್ರಿಕ ದೋಷಗಳಿಂದ ಪಾವತಿಯಾಗಿಲ್ಲವೆಂದು ಮತ್ತು ಅಧಿಕ ಕೆಲಸದ ಒತ್ತಡದಿಂದ ಗಮನಿಸಲಾಗಿಲ್ಲವೆಂದು ತಿಳಿಸಿದ್ದು, ಸದರಿ ನಿಮ್ಮ ಸಮಜಾಯಿಷಿಯು ಸಕಾರಣದಿಂದ ಕೂಡಿಲ್ಲವೆಂದು, ಹಣ ಪಾವತಿ ಮಾಡಲು ಉದ್ದೇಶಪೂರ್ವಕವಾಗಿ ನೀವು ತಡಮಾಡಿ ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1)(i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತಾರೆ."

4. The Inquiry Officer (Additional Registrar of Enquiries-16) on proper appreciation of oral and documentary evidence has held that, 'the Disciplinary Authority has 'proved' the charge levelled against the DGO Smt. R.M.Kalavathi, Panchayath Development Officer, M.Gopahalli Grama Panchayath, Ramanagara Taluk and District.'

5. On re-consideration of report of inquiry and all the records, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer.

6. As per the First Oral Statement of DGO furnished by the Inquiry Officer, DGO – Smt. R.M.Kalavathi, is due for retirement on 31.5.2026.

7. Having regard to the nature of charge 'proved' against DGO – Smt. R. M. Kalavathi, Panchayath Development Officer, M.Gopahalli Grama Panchayath, Ramanagara Taluk and District and an consideration of the totality of circumstances-,

i) 'it is hereby recommended to the Government to impose penalty of 'withholding two annual increments payable to DGO – Smt. R.M.Kalavathi with cumulative effect.'

8. Action taken in the matter shall be intimated to this Authority.

Connected records are enclosed herewith.

12-12-19

**(JUSTICE B.S.PATIL)**
Upalokayukta-2,
State of Karnataka.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್–2/ಡಿಇ–720/2017/ಎ.ಆರ್.ಇ–16

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001,
ದಿನಾಂಕ: 10/12/2019.

## ವಿಚಾರಣಾ ವರದಿ

**ಉಪಸ್ಥಿತರು:** ಸೆಲ್ವಕುಮಾರ್.ಸಿ. ಅಪರ ನಿಬಂಧಕರು ವಿಚಾರಣೆಗಳು–16,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಶ್ರೀಮತಿ ಆರ್.ಎಂ.ಕಲಾವತಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಎಂ.ಗೋಪಳ್ಳಿ ಪಂಚಾಯಿತಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಬಿಡಿ–8220/2015/ಡಿ.ಆರ್.ಇ–5,
   · ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 12/04/2017.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/411/ಗ್ರಾಪಂಕಾ 2017, ಬೆಂಗಳೂರು, ದಿನಾಂಕ 19/05/2017.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್–2/ಡಿಇ–720/2017, ಬೆಂಗಳೂರು ದಿನಾಂಕ: 30/05/2017.
4. Note No.Uplok-1 & 2/DE/Transfers/ 2019, dated 07.02.2019.

* * * *

ಈ ದೂರನ್ನು, ದೂರುದಾರರಾದ ಶ್ರೀ.ಆರ್.ಧನಂಜಯ್ಯ ಬಿನ್ ರಾಮಣ್ಣ, ಬಿಲ್ಲೆದೊಡ್ಡಿ(ಎಂ.ಗೋಪಿಹಳ್ಳಿ ಪಂಚಾಯಿತಿ) ಬಿಡದಿ ಹೋಬಳಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರರಾದ ಶ್ರೀಮತಿ ಆರ್.ಎಂ.ಕಲಾವತಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಎಂ.ಗೋಪಳ್ಳಿ ಪಂಚಾಯಿತಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ(ಇನ್ನು ಮುಂದೆ ಆ.ಸ.ನೌ ಎಂದು ಸಂಭೋದಿಸಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪ ಮತ್ತು ದುರ್ನಡತೆಯಿಂದ ವರ್ತಿಸಿರುವುದಾಗಿ ಆಪಾದಿಸಿ ದೂರು ದಾಖಲಿಸಿರುತ್ತಾರೆ.

2) ತನಿಖೆ ಪೂರ್ಣಗೊಂಡ ನಂತರ ಸರ್ಕಾರಕ್ಕೆ, ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ಅಡಿಯಲ್ಲಿ, ಉಲ್ಲೇಖ(1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿ ಅನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ 19/05/2017ರಂದು ಮಾನ್ಯ ಉಪಲೋಕಾಯುಕ್ತ-2ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ನಾಮ ನಿರ್ದೇಶನವನ್ನು ನೀಡಿದ್ದು, ಅದರಂತೆ ಮಾನ್ಯ ಉಪಲೋಕಾಯುಕ್ತ-2ರವರು ದಿನಾಂಕ 30/05/2017ರಂದು ಅಪರ ನಿಬಂಧಕರು, ವಿಚಾರಣೆಗಳು-11ರವರಿಗೆ ವಿಚಾರಣೆ ಮಾಡಿ ವರದಿಯನ್ನು ಉಲ್ಲೇಖ (3)ರಲ್ಲಿ ಕಾಣಿಸಿದಂತೆ ಶಿಫಾರಸ್ಸು ಮಾಡಿದ್ದು, ಉಲ್ಲೇಖ (4)ರಂತೆ ಅಪರ ನಿಬಂಧಕರು, ವಿಚಾರಣೆಗಳು-11ರವರಿಂದ ಈ ವಿಚಾರಣಾ ಪ್ರಾಧಿಕಾರವಾದ, ಅಪರ ನಿಬಂಧಕರು, ವಿಚಾರಣೆಗಳು-16ಕ್ಕೆ ವರ್ಗಾವಣೆಗೊಂಡಿರುತ್ತದೆ.

3) ನಾಮ ನಿರ್ದೇಶನದ ಆದೇಶದಂತೆ, ಆ.ಸ.ನೌರವರ ವಿರುದ್ಧ ದೋಷರೋಪಣೆ (Article of charges)ಅನ್ನು ಅಪರ ನಿಬಂಧಕರು, ವಿಚಾರಣೆಗಳು-11ರವರು ರಚಿಸಿದ್ದು, ಸದರಿ ದೋಷಾರೋಪಣೆ ಅನುಬಂಧ-1 ಮತ್ತು ಅನುಬಂಧ-2ರೊಂದಿಗೆ ದುರ್ನಡತೆ ಮತ್ತು ಕರ್ತವ್ಯ ಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ 14/08/2017ರಂದು ಕಳುಹಿಸಲಾಗಿರುತ್ತದೆ. ಸದರಿ ದೋಷಾರೋಪಣೆಯ ವಿವರ ಈ ಕೆಳಕಂಡಂತಿದೆ.

<u>ಅನುಬಂಧ-1</u>

**<u>ದೋಷಾರೋಪಣೆ</u>**

4) ಆಪಾದಿತ ಸರ್ಕಾರಿ ನೌಕರರಾದ ಶ್ರೀಮತಿ ಆರ್.ಎಂ.ಕಲಾವತಿ ಆದ ನೀವು, ರಾಮನಗರ ಜಿಲ್ಲೆ ಮತ್ತು ತಾಲ್ಲೂಕಿನ ಎಂ.ಗೋಪಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿಕೊಂಡಿದ್ದ ಅವಧಿಯಲ್ಲಿ, ನರೇಗಾ ಕಾರ್ಯಕ್ರಮದಡಿ ದೂರುದಾರರಾದ ಆರ್.ಧನಂಜಯ್ಯರವರು ಮೀನು ಸಾಕಾಣಿಕೆ ಹೊಂಡವನ್ನು ಭಾಗಶ: ನಿರ್ವಹಿಸಿದ್ದು, ಈ ಸಂಬಂದ ಹಣವನ್ನು ತಾಂತ್ರಿಕ ದೋಷಗಳಿಂದ ಪಾವತಿಯಾಗಿಲ್ಲವೆಂದು ಮತ್ತು ಅಧಿಕ ಕೆಲಸದ ಒತ್ತಡದಿಂದ ಗಮನಿಸಲಾಗಿಲ್ಲವೆಂದು ತಿಳಿಸಿದ್ದು, ಸದರಿ ನಿಮ್ಮ ಸಮಜಾಯಿಷಿಯು ಸಕಾರಣದಿಂದ ಕೂಡಿಲ್ಲವೆಂದು, ಹಣ ಪಾವತಿ ಮಾಡಲು ಉದ್ದೇಶಪೂರ್ವಕವಾಗಿ ನೀವು

ತಡಮಾಡಿ ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1)(i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತಾರೆ.

## ಅನುಬಂಧ-2

## ದೋಷಾರೋಪಣೆಯ ವಿವರ

5) ದೂರುದಾರರಾದ ಶ್ರೀ.ಆರ್.ಧನಂಜಯ್ಯ ಬಿನ್ ರಾಮಣ್ಣ, ಬಿಲ್ಲೆದೊಡ್ಡಿ(ಎಂ.ಗೋಪಿಹಳ್ಳಿ ಪಂಚಾಯಿತಿ) ಬಿಡದಿ ಹೋಬಳಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ ರವರು ನರೇಗಾ ಯೋಜನೆಯಡಿಯಲ್ಲಿ ಮೀನು ಸಾಕಾಣಿಕೆ ಸಲುವಾಗಿ ಕೆರೆ ನಿರ್ಮಿಸಲು ಮತ್ತು ದನದ ಕೊಟ್ಟಿಗೆ ಕಟ್ಟುವ ಸಂಬಂದ 3 ವರ್ಷಗಳ ಹಿಂದೆ ಅರ್ಜಿ ಸಲ್ಲಿಸಿದ್ದು, ಹಲವಾರು ಬಾರಿ ಪಂಚಾಯಿತಿ ಕಚೇರಿಗೆ ಹೋಗಿದ್ದರೂ ಸಹ ಯಾವುದೇ ರೀತಿಯ ಅನುಕೂಲ ಮಾಡಿಕೊಡದೆ ಸಂಬಂದಪಟ್ಟ ದಾಖಲಾತಿಗಳನ್ನು ವಾಪಸ್ಸು ನೀಡಿದ್ದಾರೆಂದು ಆಪಾದಿಸಿರುತ್ತಾರೆ.

6) ಸದರಿ ಆಪಾದನೆಗೆ ಸಂಬಂದಿಸಿದಂತೆ, ಗೌರವಾನ್ವಿತ ಲೋಕಾಯುಕ್ತರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಮನಗರ ರವರಿಗೆ ತನಿಖೆ ನಡೆಸಿ ವರದಿಯನ್ನು ಸಲ್ಲಿಸುವಂತೆ ಸೂಚಿಸಿದ್ದು, ಅದರಂತೆ ಕಾರ್ಯನಿರ್ವಾಹಕ ಅಧಿಕಾರಿಯವರು ದೂರುದಾರರ ತಂದೆ ರಾಮಣ್ಣ ಅರ್ಜಿ ಸಲ್ಲಿಸಿದ್ದು, ಕಾಮಗಾರಿಯನ್ನು ಭಾಗಶ: ಮುಗಿಸಿರುವುದರಿಂದ ಅಳತೆ ಪುಸ್ತಕದ ಪ್ರಕಾರ ರೂ.16,999/-ಗಳನ್ನು ಕೊಟ್ಟಿದ್ದು, ಎಂ.ಬಿ.ಪುಸ್ತಕದಲ್ಲಿ ಸಹಾಯಕ ನಿರ್ದೇಶಕರು ಮತ್ತು ತಾಂತ್ರಿಕ ಸಹಾಯಕರ ಸಹಿಗಳು ಇಲ್ಲದ ಕಾರಣ ದೂರುದಾರರು ಒತ್ತಡದ ನೀತಿ ಅನುಸರಿಸುತ್ತಿದ್ದು, ಈ ಸಂಬಂದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರಿಗೆ ಮುಕ್ತಾಯವಾಗಿರುವ ಹಂತದವರೆಗೆ ಹಣ ಪಾವತಿಸಲು ನಿರ್ದೇಶನ ನೀಡಿರುವುದು ಕಂಡು ಬಂದಿರುತ್ತದೆ.

7) ದೂರುದಾರರು ಸಲ್ಲಿಸಿರುವ ದೂರಿನಲ್ಲಿ ಅಂಶಗಳ ಕುರಿತು ಸಲ್ಲಿಸಿದ ತನಿಖಾ ವರದಿಗೆ ಆಪಾದಿತ ಸರ್ಕಾರಿ ನೌಕರರು ಮತ್ತು ಸೂಕ್ತ ಸಾಕ್ಷ್ಯಾಧಾರಗಳನ್ನು ಸಲ್ಲಿಸಿದ್ದು ಈ ಕೆಳಕಂಡ ಅಂಶಗಳು ಕಂಡು ಬರುತ್ತವೆ.

1) ದೂರುದಾರರು ಮೀನು ಸಾಕಾಣಿಕೆ ಹೊಂಡವನ್ನು ಭಾಗಶ: ಪೂರ್ಣಗೊಂಡಿದ್ದು ಹಣ ಪಾವತಿ ಮಾಡಿರುವುದಿಲ್ಲ.

2) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಅಧಿಕ ಕೆಲಸದ ಒತ್ತಡದಿಂದ ಆಗಿರುವ ತಾಂತ್ರಿಕ ದೋಷವನ್ನು ಗಮನಿಸಲಾಗಿಲ್ಲವೆಂದು ಹೇಳಿರುವುದು.

3) ಆಪಾದಿತ ಸರ್ಕಾರಿ ನೌಕರರು ಯಾವ ರೀತಿಯ ತಾಂತ್ರಿಕ ದೋಷದ ಕಾರಣದಿಂದ ಹಣ ಪಾವತಿಯಾಗಿಲ್ಲ ಎಂಬ ಬಗ್ಗೆ ಯಾವುದೇ ಸಮಜಾಯಿಷಿ ನೀಡಿರುವುದಿಲ್ಲ.

8) ದೂರಿನಲ್ಲಿನ ಅಂಶಗಳಿಗೆ ತನಿಖಾಧಿಕಾರಿಯವರು ಕೊಟ್ಟ ತನಿಖಾ ವರದಿಯಲ್ಲಿನ ಅಂಶಗಳಿಗೆ ಆಪಾದಿತ ಸರ್ಕಾರಿ ನೌಕರರಾದ ಆಸನೌರವರು ಭಾಗಶ: ಪೂರ್ಣಗೊಂಡಿರುವ ಕಾಮಗಾರಿಗೆ ಹಣ ಪಾವತಿಸದೆ, ತಾಂತ್ರಿಕ ದೋಷ ಮತ್ತು ಅಧಿಕ ಕೆಲಸದ ಒತ್ತಡ ಎಂಬ ಕಾರಣ ನೀಡಿರುವುದು ಸಮಂಜಸವಾಗಿರದ ಕಾರಣ ಈ ಕೃತ್ಯ ದುರ್ನಡತೆ ಎಂಬ ಪರಿಭಾಷೆಯಲ್ಲಿ ಬರುವುದರಿಂದ ಕರ್ನಾಟಕ ಸಿವಿಲ್ ಸೇವಾ (ನಡತೆ) 1966ರಡಿ ನಿಯಮ 3(1) ರಡಿಯಲ್ಲಿ ದುರ್ವರ್ತನೆ ಮಾಡಿದ್ದಾರೆಂದು ಕಂಡು ಬಂದಿದ್ದರಿಂದ ಎದುರುದಾರರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರಡಿಯಲ್ಲಿ ವರದಿಯನ್ನು ಸಲ್ಲಿಸಿದ್ದು, ಶಿಸ್ತು ಕ್ರಮವನ್ನು ಜರುಗಿಸಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡುವಂತೆ ಕೋರಿರುವುದನ್ನು ಪರಿಗಣಿಸಿ, ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಯಿಂದ ಮಾಡಿರುವ ಶಿಫಾರಸ್ಸನ್ನು ಒಪ್ಪಿ ನಿಮ್ಮ ವಿರುದ್ಧ ಶಿಸ್ತು ಕ್ರಮಕೈಗೊಂಡು ವರದಿಯನ್ನು ಸಲ್ಲಿಸುವಂತೆ ಗೌರವಾನ್ವಿತ ಉಪಲೋಕಾಯುಕ್ತ-2ರವರಿಗೆ ವಹಿಸಲಾಗಿರುತ್ತದೆ.

9) ಈ ಮೇಲ್ಕಂಡ ದೋಷಾರೋಪಣೆ (Article of charge)ಅನ್ನು ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ, ಆ.ಸ.ನೌ.ರವರು ದಿನಾಂಕ 03/10/2017ರಂದು ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆ (First Oral Statement) ನಿಯಮ 11(9) ಕೆಸಿಎಸ್ (ಸಿಸಿಎ) ರೂಲ್ಸ್ 1957ರಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

10) ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

11) ಆ.ಸ.ನೌರವರು ಪ್ರತಿ ರಕ್ಷಣಾ ಹೇಳಿಕೆ ಸಲ್ಲಿಸಿ, ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸಿರುತ್ತಾರೆ. ಮುಂದುವರೆದು, ನರೇಗಾ ಯೋಜನೆಯಡಿಯಲ್ಲಿ ಕೂಲಿ ಕೆಲಸಗಾರರು ಕೆಲಸಕ್ಕಾಗಿ ಅರ್ಜಿ ಸಲ್ಲಿಸಬೇಕೆಂದು, ಅದು ಗ್ರಾಮ ಪಂಚಾಯತಿಯಲ್ಲಿ ನೋಂದಣಿ ಆದ ತರುವಾಯ, ಉದ್ಯೋಗಕ್ಕೆ ಅವರುಗಳಿಗೆ ಕೆಲಸ ಮಾಡಲು ಅವಕಾಶ ಕಲ್ಪಿಸಲಾಗುವುದೆಂದು ಹೇಳಿರುತ್ತಾರೆ. ಅಲ್ಲದೆ, ಕೂಲಿ ಪಾವತಿಯ ಎಲ್ಲಾ ಪ್ರಕ್ರಿಯೆಗಳನ್ನು ಗಣಕಯಂತ್ರದಲ್ಲಿ ದಾಖಲಿಸಬೇಕಾಗುತ್ತದೆ ಎಂದು ಹಾಗೂ ಕೂಲಿ ಹಣವನ್ನು ನಗದಾಗಿ ಅಥವಾ ಚೆಕ್ ಮೂಲಕ ಪಾವತಿಸುವ ಕ್ರಮ ಅನುಸರಿಸುವಂತಿಲ್ಲವೆಂದು ಹೇಳಿರುತ್ತಾರೆ. ಮುಂದುವರೆದು, ನರೇಗಾ ಯೋಜನೆಯಡಿ ದೂರುದಾರರಾದ ಶ್ರೀ.ಆರ್. ಧನಂಜಯರವರು ಮೀನಿನ ಹೊಂಡವನ್ನು ನಿರ್ಮಿಸಲು ಅರ್ಜಿ ಸಲ್ಲಿಸಿದ್ದು, ಹೊಂಡದ ನಿರ್ಮಾಣಕ್ಕೆ ಅಗತ್ಯವಿರುವ ಕೂಲಿ ಕಾರ್ಮಿಕರ ಹೆಸರನ್ನು ನಮೂನೆ 6 ರಡಿಯಲ್ಲಿ ಅರ್ಜಿ ಸಲ್ಲಿಸಿದ್ದಾಗಿ, ಆ ಕಾಮಗಾರಿಯಲ್ಲಿ ಕೆಲಸ ನಿರ್ವಹಿಸಲು ಬಿ.ಆರ್.ಧನಂಜಯ್ಯ, ಉಮಾದೇವಿ, ನಾಗರಾಜು ಎಸ್, ಸರಸ್ವತಿ ಎಂ.ಪಿ, ಕಮಲಮ್ಮ, ರಾಮಣ್ಣ, ಶೋಭ ಎನ್.ಕೆ, ಸುರೇಶ್ ಬಿ.ಆರ್, ರೇವಣಸಿದ್ದಯ್ಯ, ಹಾಗೂ ಇನ್ನಿತರರು ದಿನಾಂಕ 26/4/2014 ರಂದು ಅರ್ಜಿ ಸಲ್ಲಿಸಿದ್ದರೆಂದು, ಈ ಕಾಮಗಾರಿಗಳನ್ನು ನಿರ್ವಹಿಸಲು ಅನುಸರಿಸಬೇಕಾದ ನಿಯಮಗಳಂತೆ ಈ ಕೂಲಿಕಾರ್ಮಿಕರ ಹೆಸರಿನಲ್ಲಿ ದಿನಾಂಕ 8/5/2014 ರಿಂದ 18/5/2014 ರವರೆಗೆ ಎನ್.ಎಂ.ಆರ್ ಸೃಜಿಸಿರುವುದಾಗಿ ಹೇಳಿರುತ್ತಾರೆ.

ಮುಂದುವರೆದು ವಿವರಿಸುವುದೇನೆಂದರೆ, ಈ ಕೂಲಿ ಕಾರ್ಮಿಕರಲ್ಲಿ ದೂರುದಾರರಾದ ಬಿ.ಆರ್.ಧನಂಜಯ ಸಹಾ ಒಬ್ಬರಾಗಿದ್ದು, ಅವರ ಜಮೀನಿನಲ್ಲಿ ಮೀನು ಕೃಷಿ ಹೊಂಡವನ್ನು ನಿರ್ಮಿಸಲು ಉದ್ದೇಶಿಸಿದ್ದಾಗಿ. ಈ ಮೀನು ಕೃಷಿ ಹೊಂಡದ ನಿರ್ಮಾಣದಲ್ಲಿ ಕೂಲಿಕಾರರು ಕೆಲಸ ನಿರ್ವಹಿಸಿರುವ ಬಗ್ಗೆ ಹಾಗೂ ಕೃಷಿ ಹೊಂಡದ ಅಳತೆ ಬಗ್ಗೆ ಸಂಬಂದಪಟ್ಟ ಇಂಜಿನಿಯರ್ ರವರಿಂದ ಮಾಡಿಸಿ, ಅದರ ದೃಢೀಕೃತಗೊಂಡ ಅಳತೆ ಪುಸ್ತಕವನ್ನು ಪಡೆದ ಮೇಲೆ ಆ ವಿವರಗಳನ್ನು ತಂತ್ರಾಂಶದಲ್ಲಿ ದಾಖಲಿಸಬೇಕಾಗಿರುತ್ತದೆ ಎಂದು ಹೇಳಿರುತ್ತಾರೆ. ಆ ದೃಢೀಕೃತ ದಾಖಲೆಯನ್ನು ಸಂಬಂದಪಟ್ಟ ಇಂಜಿನಯರ್ ರವರು ನಿಗದಿತ ಅವಧಿಯಲ್ಲಿ ಅಂದರೆ ಕಾಮಗಾರಿ ಮುಗಿದ ಒಂದು ವಾರದೊಳಗೆ ಸಲ್ಲಿಸಬೇಕಾಗಿರುತ್ತದೆ ಎಂದು, ಆದರೆ, ಕಾಮಗಾರಿಗಳ ಅಳತೆ ಪುಸ್ತಕವನ್ನು ಆ ಅವಧಿಯಲ್ಲಿ ಸಲ್ಲಿಸದೆ ವಿಳಂಭವಾಗಿ ದಿನಾಂಕ 20/3/2015 ರಂದು ನೀಡಿರುತ್ತಾರೆಂದು ಹೇಳಿರುತ್ತಾರೆ. ಮುಂದುವರೆದು, ಅಳತೆ ಪುಸ್ತಕದ ದೃಢೀಕರಣದ ವಿವರಗಳನ್ನು ತಂತ್ರಾಂಶದಲ್ಲಿ ಅಳವಡಿಸದೆ, ಕೂಲಿ ಕಾರ್ಮಿಕರ ಕೂಲಿ ಪಾವತಿಸಲು ಸಾಧ್ಯವಾಗಿರುವುದಿಲ್ಲವೆಂದು, ಸಂಬಂದಪಟ್ಟ ಇಂಜಿನಿಯರ್ ರವರ ಆಡಳಿತಾತ್ಮಕ ವಿಳಂಭದಲ್ಲಿ ಕೂಲಿ ಪಾವತಿಸಲು ವಿಳಂಬವಾಗಿರುವುದಕ್ಕೆ ಕಾರಣವಾಗಿರುತ್ತದೆ ಎಂದು ಹೇಳಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಇಂಜಿನಿಯರ್ ವಿರುದ್ಧ ಶಿಸ್ತುಕ್ರಮವನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತೆಗೆದುಕೊಂಡಿರುವುದಾಗಿ ಹೇಳಿರುತ್ತಾರೆ.

ಮುಂದುವರೆದು, ಈ ಆಸನೌರವರು ವಿವರಿಸುವುದೇನೆಂದರೆ, ನೆಟ್‌ವರ್ಕ್ ಸಮಸ್ಯೆಯಿಂದ ಕೆಲವೇ ಸೆಕಂಡುಗಳು ವಿಳಂಬವಾದರೂ ಅನುದಾನದ ಮೊತ್ತ ಕೇಂದ್ರ ನಿಧಿಯಲ್ಲಿ ಲಭ್ಯವಾಗದೆ, ಕೂಲಿ ಕಾರ್ಮಿಕರ ಹಣವನ್ನು ವರ್ಗಾಯಿಸಲು ಸಾಧ್ಯವಾಗುವುದಿಲ್ಲವೆಂದು ಹೇಳಿರುತ್ತಾರೆ. ಈ ಕಾರಣದಿಂದ ದೂರುದಾರರು ಹಾಗೂ ಈ ಕಾಮಗಾರಿಯಲ್ಲಿ ಕೂಲಿ ಕೆಲಸ ಮಾಡಿದ ಕಾರ್ಮಿಕರ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಸಾಧ್ಯವಾಗಿರುವುದಿಲ್ಲವೆಂದು ಹೇಳಿರುತ್ತಾರೆ. ನರೇಗಾ ಯೋಜನೆಯಡಿ ಅನುದಾನವನ್ನು ಆ ಸಮಯದಲ್ಲಿ ಲಭ್ಯವಿಲ್ಲದ ಕಾರಣ ಕೂಲಿ ಪಾವತಿಸಲು ಎಲ್ಲಾ ಆಡಳಿತಾತ್ಮಕ ಪ್ರಕ್ರಿಯೆಗಳನ್ನು ಕಾಲಮಿತಿಯೊಳಗೆ ಮುಗಿಸಿದ್ದರೂ ಸಹಾ, ಅನುದಾನವಿಲ್ಲದೆ ಕೂಲಿ ಕಾರ್ಮಿಕರ ಖಾತೆಗೆ ಹಣ ಜಮೆ ಮಾಡಲು ವಿಳಂಬವಾಗಿರುತ್ತದೆ ಎಂದು ಹೇಳಿರುತ್ತಾರೆ. ಈ ವಿಳಂಬವು ಯಾವುದೇ ಉದ್ದೇಶಪೂರ್ವಕವಾಗಿರುವುದಿಲ್ಲವೆಂದು, ಇಂಜಿನಿಯರ್‌ರವರು ಅಳತೆ

ಪುಸ್ತಕ ದೃಢೀಕರಣವನ್ನು ಸಲ್ಲಿಸಲು ವಿಳಂಬವಾಗಿರುತ್ತದೆ ಎಂದು ಹೇಳಿರುತ್ತಾರೆ. ಈ ಎಲ್ಲಾ ಕಾರಣದಿಂದ ಈ ಪ್ರಕರಣದ ಆರೋಪದಿಂದ ದೋಷಮುಕ್ತಗೊಳಿಸುವಂತೆ ವಿನಂತಿಸಿರುತ್ತಾರೆ.

12) ಈ ವಿಚಾರಣೆಯಲ್ಲಿ, ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಆರ್.ಧನಂಜಯರವರನ್ನು ಪಿ.ಡಬ್ಲ್ಯು.1 ಎಂದು ಸಾಕ್ಷಿ ನುಡಿಸಿಕೊಂಡು, ನಿ.ಪಿ-1 ರಿಂದ ನಿ.ಪಿ-4ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯಾದ ಶ್ರೀ.ಕೆ.ಎಸ್.ಮಂಜುನಾಥ ರವರನ್ನು, ಪಿ.ಡಬ್ಲ್ಯು.2 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ-5 ರಿಂದ ನಿ.ಪಿ-8ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ಆಸನೌರವರು ತಮ್ಮ ಪರವಾಗಿ ತಾನು ಡಿ.ಡಬ್ಲ್ಯು-1 ಎಂದು ಸಾಕ್ಷಿ ನುಡಿದಿದ್ದು, ನಿಡಿ-1 ರಿಂದ 16 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ಆ.ಸ.ನೌ ರವರ ದ್ವಿತೀಯ ಮೌಖಿಕ ಹೇಳಿಕೆ (Second Oral Statement)ಅನ್ನು ತೆಗೆದುಕೊಳ್ಳಲಾಗಿರುತ್ತದೆ.

13) ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಯವರ ವಾದವನ್ನು ಆಲಿಸಲಾಯಿತು ಮತ್ತು ಆ.ಸ.ನೌರವರು ಸಲ್ಲಿಸಿರುವ ಲಿಖಿತ ವಾದಾಂಶವನ್ನು ಪರಿಶೀಲಿಸಲಾಯಿತು.

14) ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ-1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ-2**: ಆದೇಶವೇನು?

15) ವಾದವಿವಾದ ಆಲಿಸಿದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ–1)** ಸಕಾರಾತ್ಮಕವಾಗಿ.

**ಅಂಶ–2)** ಅಂತಿಮ ಆದೇಶದಂತೆ.

## ಕಾರಣಗಳು

**16) ಅಂಶ–1:** ಈ ಪ್ರಕರಣದಲ್ಲಿ, ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪವನ್ನು ರುಜುವಾತುಪಡಿಸಲು, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಪ್ರಕರಣದ ದೂರುದಾರರಾದ ಆರ್.ಧನಂಜಯರವರನ್ನು ಪಿ.ಡಬ್ಲ್ಯು.1 ಎಂದು ಸಾಕ್ಷಿ ನುಡಿಸಿಕೊಂಡಿದ್ದು, ಶ್ರೀ.ಕೆ.ಎಸ್.ಮಂಜುನಾಥ್, ತನಿಖಾಧಿಕಾರಿರವರನ್ನು ಪಿ.ಡಬ್ಲ್ಯು.2 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ–5 ರಿಂದ ನಿ.ಪಿ–8 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

17) ನಿ.ಪಿ–1 ದಾಖಲೆಯು ಲಿಖಿತ ದೂರು, ನಿ.ಪಿ–2 ಮತ್ತು 3 ಪ್ರಪತ್ರ–1 ಮತ್ತು 2, ನಿ.ಪಿ–4 ದೂರುದಾರರು ದೂರನ್ನು ಕೈಬಿಡಬೇಕೆಂದು ಈ ಸಂಸ್ಥೆಗೆ ದಿ.23/12/2016 ರಂದು ಸಲ್ಲಿಸಿದ ಪತ್ರ, ನಿ.ಪಿ–5 ಮತ್ತು 6 ಪಿ.ಡಬ್ಲ್ಯು–2 ತನಿಖಾಧಿಕಾರಿ ತನಿಖೆ ಕೈಗೊಂಡು ಸಲ್ಲಿಸಿದ ತನಿಖಾ ವರದಿ, ನಿ.ಪಿ–7, ಸ್ಥಳ ಪರಿಶೀಲನಾ ಮಹಜರ್, ನಿ.ಪಿ–8 ದಾಖಲೆಯು ಅನುಸರಣಾ ವರದಿಯಾಗಿರುತ್ತದೆ.

18) ದೂರುದಾರರ ಆಪಾದನೆ ಮತ್ತು ಆ.ಸ.ನೌರವರ ವಿರುದ್ಧ ರಚಿಸಲಾದ ದೋಷಾರೋಪಣೆ ಏನೆಂದರೆ,

1) ದೂರುದಾರರು ಮೀನು ಸಾಕಾಣಿಕೆ ಹೊಂಡವನ್ನು ಭಾಗಶ: ಪೂರ್ಣಗೊಳಿಸಿದ್ದರೂ ಹಣ ಪಾವತಿ ಮಾಡಿರುವುದಿಲ್ಲ.

2) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಅಧಿಕ ಕೆಲಸದ ಒತ್ತಡದಿಂದ ಆಗಿರುವ ತಾಂತ್ರಿಕ ದೋಷವನ್ನು ಗಮನಿಸಲಾಗಿಲ್ಲವೆಂದು ಹೇಳಿರುವುದು.

3) ಆಪಾದಿತ ಸರ್ಕಾರಿ ನೌಕರರು ಯಾವ ರೀತಿಯ ತಾಂತ್ರಿಕ ದೋಷದ ಕಾರಣದಿಂದ ಹಣ ಪಾವತಿಯಾಗಿಲ್ಲ ಎಂಬ ಬಗ್ಗೆ ಯಾವುದೇ ಸಮಜಾಯಿಷಿ ನೀಡಿರುವುದಿಲ್ಲ.

19) ಆ.ಸ.ನೌರವರ ವಿರುದ್ಧ ರಚಿಸಲಾದ ಆರೋಪವನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರನ್ನು ಪಿ.ಡಬ್ಲ್ಯು-1 ಎಂದು ಸಾಕ್ಷಿ ನುಡಿಸಿಕೊಂಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈ ಕೆಳಕಂಡಂತೆ ನುಡಿದಿರುತ್ತಾರೆ.

**" ಉದ್ಯೋಗಖಾತ್ರಿ(ನರೇಗಾ) ಯೋಜನೆಯಡಿಯಲ್ಲಿ ನನ್ನ ಸ್ವಂತ ಜಮೀನಿನಲ್ಲಿ ಮೀನು ಸಾಕಣೆ ತೊಟ್ಟಿ ನಿರ್ಮಿಸಲು ಮತ್ತು ದನದ ಕೊಟ್ಟಿಗೆ ನಿರ್ಮಿಸಲು ಸುಮಾರು 3 ವರ್ಷಗಳಿಂದ ಎಂ.ಗೋಪನಹಳ್ಳಿ ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿದರೂ ಸಹ ನನ್ನ ಕೆಲಸ ಆಗದಿದ್ದ ಕಾರಣ ನಾನು ಲೋಕಾಯುಕ್ತಕ್ಕೆ ದೂರು ಸಲ್ಲಿಸಿರುತ್ತೇನೆ."**

**"ನಾನು ಲೋಕಾಯುಕ್ತ ಸಂಸ್ಥೆಗೆ ದೂರು ನೀಡಿದ ನಂತರ ಗ್ರಾಮ ಪಂಚಾಯಿತಿಯರವರು ನನ್ನ ಕೆಲಸ ಮಾಡಿಕೊಟ್ಟಿರುತ್ತಾರೆ."**

20) ಈ ರೀತಿ ನುಡಿದಿರುವುದನ್ನು ಪರಶೀಲಿಸಿದಾಗ ಈ ದೂರುದಾರರು ತನ್ನ ಜಮೀನಿನಲ್ಲಿ ಮೀನು ಸಾಗಾಣಿಕಾ ತೊಟ್ಟಿ ನಿರ್ಮಿಸಲು ಮತ್ತು ದನದ ಕೊಟ್ಟಿಗೆ ನಿರ್ಮಿಸಲು ಸ್ಥಳೀಯ ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದು, ಅದು ಸಫಲವಾಗದ ಕಾರಣ, ಈ ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸಿರುವುದು ಕಂಡು ಬರುತ್ತದೆ. ಅಲ್ಲದೆ, ಆಸನೌರವರು ಸ್ಥಳೀಯ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ ಇದ್ದಾಗ್ಯೂ ನಿಪಿ-1 ದೂರಿನಲ್ಲಿ ಕಾಣಿಸಿದಂತೆ ಸಹಕರಿಸದೆ ನಿರಾಕರಿಸಿರುವುದು ಕಂಡು ಬರುತ್ತದೆ. ತದನಂತರ, ಈ ದೂರುದಾರರು ಮಾನ್ಯ ಲೋಕಾಯುಕ್ತರವರು ರಾಮನಗರ ಜಿಲ್ಲೆಗೆ ಸಾರ್ವಜನಿಕ ಕುಂದುಕೊರತೆಗಳ ಕ್ಯಾಂಪ್‌ನಲ್ಲಿರುವಾಗ, ಈ ದೂರುದಾರರು ನಿಪಿ-1 ದೂರು ಸಲ್ಲಿಸಿರುವುದು ಕಡತದಿಂದ ಕಂಡು ಬರುತ್ತದೆ. ಸದರಿ ದೂರನ್ನು ಮಾನ್ಯ ಲೋಕಾಯುಕ್ತರವರು ಸ್ಥಳೀಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ತನಿಖೆಗಾಗಿ

ನಿರ್ದೇಶಿಸಿದ್ದು, ಮೀನಿನ ಹೊಂಡಕ್ಕೆ ಸಂಬಂಧಿಸಿದಂತೆ ಹಣ ಪಾವತಿಯಾಗಿರುವುದಿಲ್ಲವೆಂದು ದೂರುದಾರರು ಆಗಿನ ಸಿಇಒ/ಪಿ.ಡಬ್ಲ್ಯು2 ರವರಿಗೆ ತಿಳಿಸಿದ ಮೇರೆಗೆ, ದಿನಾಂಕ 27/4/2015 ರಂದು ಸದರಿ ತನಿಖಾಧಿಕಾರಿಯವರು ಭೇಟಿ ನೀಡಿ ಗ್ರಾಮಸ್ಥರ ಮತ್ತು ಅರ್ಜಿದಾರರ ಸಮ್ಮುಖದಲ್ಲಿ ಪರಿಶೀಲಿಸಿರುವುದು ಕಂಡು ಬರುತ್ತದೆ. ಈ ಬಗ್ಗೆ ದಿ.30/4/2015 ರಂದು ಈ ಲೋಕಾಯುಕ್ತ ಸಂಸ್ಥೆಯ ರಿಜಿಸ್ಟ್ರಾರ್‌ರವರಿಗೆ ನಿಪಿ–5 ಮತ್ತು 6 ರಂತೆ ವರದಿ ಸಲ್ಲಿಸಿರುವುದು ಕಂಡು ಬರುತ್ತದೆ. ನಿಪಿ–7 ಸ್ಥಳ ಪಂಚನಾಮೆ ಇದ್ದು ತನಿಖಾಧಿಕಾರಿ ಸ್ಥಳದಲ್ಲೆ ತಯಾರಿಸಿದ ಪಂಚನಾಮೆ ಆಗಿರುತ್ತದೆ.

21) ತನಿಖಾಧಿಕಾರಿ/ಪಿ.ಡಬ್ಲ್ಯು2 ರವರು ನೀಡಿರುವ ನಿಪಿ–5 ಮತ್ತು 6 ವರದಿಗಳನ್ನು ಪರಿಶೀಲಿಸಿದಾಗ, ದೂರುದಾರರ ತಂದೆಯಾದ ಶ್ರೀ.ರಾಮಣ್ಣ ಬಿನ್ ವೀರಭದ್ರಯ್ಯ ಎಂಬುವವರ ಹೆಸರಿಗೆ ಕ್ರಿಯಾ ಯೋಜನೆ ಅನುಮೋದನೆಯಾಗಿರುವುದು ಕಂಡು ಬಂದಿರುವುದಾಗಿ ಹಾಗೂ ಈ ಕಾಮಗಾರಿಗೆ ಸಂಬಂಧಿಸಿದಂತೆ ಭಾಗಶ: ಕೆಲಸ ನಿರ್ವಹಿಸಿದ್ದಕ್ಕೆ ರೂ.16,999/– ಗಳಿಗೆ ಸಂಬಂಧಿಸಿದ ಇಂಜಿನಿಯರ್‌ರವರು ಮೆಷರ್‌ಮೆಂಟ್ ಪುಸ್ತಕದಲ್ಲಿ ಕೆಲಸ ಆಗಿರುವುದಕ್ಕೆ ವಿವರಗಳನ್ನು ನಮೂದಿಸಿರುವುದಾಗಿ, ಅವುಗಳಿಗೆ ಸಂಬಂಧಪಟ್ಟ ಪೋಟೋ ಕಡತದಲ್ಲಿರುವುದು ಗೋಚರವಾಗಿರುತ್ತದೆಂದು ಹೇಳಿರುತ್ತಾರೆ. ಮುಂದುವರೆದು, ಸದರಿ ಪೋಟೋಗಳಿಗೆ ಸಂಬಂಧಿಸಿದ ಪಿ.ಡಿ.ಒ/ಇಂಜಿನಿಯರರವರು ದೃಢೀಕರಿಸಿರುವುದಿಲ್ಲವೆಂದು ಹಾಗೂ ಮೆಷರ್‌ಮೆಂಟ್ ಪುಸ್ತಕದಲ್ಲಿ ತಾಂತ್ರಿಕ ಸಂಯೋಜಕರು ಹಾಗೂ ಸಹಾಯಕ ನಿರ್ದೇಶಕರು, ಗ್ರಾಮೀಣ ಮತ್ತು ಉದ್ಯೋಗ ರವರುಗಳು ಸಹಾ ಸಹಿ ಮಾಡಿರುವುದಿಲ್ಲವೆಂದು ಸಹಾ ಹೇಳಿರುತ್ತಾರೆ. ಹಾಗೂ ಅಂತಿಮವಾಗಿ ಉದ್ಯೋಗ ನಿರ್ವಹಿಸಿದವರ ಬ್ಯಾಂಕ್ ಖಾತೆಗೆ ರೂ.16,999/– ಹಣ ಜಮೆಯಾಗಿರುವುದಿಲ್ಲವೆಂದು ಹೇಳಿರುತ್ತಾರೆ. ಅಲ್ಲದೆ, ಎನ್.ಎಂ.ಆರ್ (ನಾಮಿನಲ್ ಮಸ್ಟರ್ ರೋಲ್) ನಲ್ಲಿ ಕೆಲಸ ನಿರ್ವಹಿಸಿದವರ/ಪಿ.ಡಿ.ಒ ರವರ ಸಹಿ ಇರುವುದಿಲ್ಲವೆಂದು ಹಾಗೂ ಸದರಿ ಹಂತದಲ್ಲಿ ಸಂಬಂಧಿಸಿದ ಪಿ.ಡಿ.ಒ ಅಥವಾ ಇಂಜಿನಿಯರ್ ರವರು ಕಾರ್ಯವಿಧಾನ ಹಾಗೂ ನಿಯಮಗಳನ್ನು ಅನುಸರಿಸದೆ ಇರುವುದು ಕಂಡು ಬಂದಿರುವುದಾಗಿ ಹೇಳಿರುತ್ತಾರೆ. ಮುಂದುವರೆದು, ಈ ಕರ್ತವ್ಯಲೋಪದ ಬಗ್ಗೆ ಸಂಬಂಧಿಸಿದ ಅಧಿಕಾರಿಗಳ/ನೌಕರರ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಕೈಗೊಳ್ಳಲಾಗುತ್ತದೆ ಎಂದೂ ಸಹ ನಿಪಿ–5 ರಲ್ಲಿ ತನಿಖಾಧಿಕಾರಿ ಮತ್ತು ಆಸನೌರವರ ಮೇಲಾಧಿಕಾರಿಗಳು ಈ ಲೋಕಾಯುಕ್ತ ಸಂಸ್ಥೆಗೆ ನಿವೇದಿಸಿಕೊಂಡಿರುವುದು ಕಂಡು ಬರುತ್ತದೆ.

ಮುಂದುವರೆದು, ನಿಪಿ–5 ರಲ್ಲಿ ವಿವರಿಸುವುದೇನೆಂದರೆ ತಾನು ದಿನಾಂಕ 27/4/2015 ರಂದು ತಪಾಸಣೆ ಮಾಡಿದ ಸಂದರ್ಭದಲ್ಲಿ ಸದರಿ ಮೀನು ಸಾಕುವ ಹೊಂಡದ ಕಾಮಗಾರಿ ಕೈಗೊಂಡಿರುವುದನ್ನು ಪರಿಶೀಲಿಸಿದಾಗ, ಅದಕ್ಕೆ ತಗುಲುವ ವೆಚ್ಚ ರೂ.22,156/– ಗಳಾಗುತ್ತದೆ ಎಂದು ಈ ಮೊಬಲಗಿನ ಪೈಕಿ ಈಗಾಗಲೆ ರೂ.16.999/–ಗಳು ಪಿ.ಡಿ.ಓ ಲಾಗಿನ್‌ನಲ್ಲಿದ್ದು, ಇದನ್ನು ಪಾವತಿಸಲು ಕ್ರಮ ವಹಿಸುವಂತೆ ಹಾಗೂ ಬಾಕಿ ರೂ.5157/– ಗಳನ್ನು ದೂರುದಾರರಿಗೆ ನಿಯಮಾನುಸಾರ ಪಾವತಿಸಲು ಕ್ರಮಕೈಗೊಳ್ಳುವಂತೆ ಗ್ರಾಮ ಪಂಚಾಯಿತಿ ಪಿಡಿಓ/ಆಸನೌರವರಿಗೆ ಸೂಚಿಸಿರುವುದಾಗಿಯೂ ಹೇಳಿರುತ್ತಾರೆ. ಈ ಬಗ್ಗೆ ನಿಪಿ–6 ತನಿಖಾ ವರದಿಯಲ್ಲಿಯೂ ಸಹ ಪುನರುಚ್ಚರಿಸಿದ್ದು, ಆಸನೌರವರ ಕರ್ತವ್ಯ ಲೋಪದ ಬಗ್ಗೆ ಹೇಳಿರುತ್ತಾರೆ.

22) ತನಿಖಾಧಿಕಾರಿಯಾದ ಪಿ.ಡಬ್ಲ್ಯು–2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಕೆಳಕಂಡಂತೆ ನುಡಿದಿರುತ್ತಾರೆ.

**" ಸ್ಥಳ ಪರಿಶೀಲನಾ ಕಾಲಕ್ಕೆ, ಶ್ರೀ.ಧನಂಜಯ ಬಿನ್ ರಾಮಣ್ಣನವರು ಮೀನು ಸಾಕಾಣಿಕಾ ಹೊಂಡ ನಿರ್ಮಿಸಿದ್ದು, ಆಗಿರುವ ಕಾಮಗಾರಿಗೆ ಹಣ ಪಾವತಿಸಲು ವಿಳಂಬವಾಗಿರುವುದು ಕಂಡು ಬಂದಿರುತ್ತದೆ."**

**"ಈ ಬಗ್ಗೆ ಸಂಬಂಧಪಟ್ಟ ಗ್ರಾಮಪಂಚಾಯಿತಿಯ ಪಿಡಿಓ ಮತ್ತು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ರವರಿಗೆ ನೋಟೀಸು ಮತ್ತು ಎಚ್ಚರಿಕೆಯನ್ನು ನೀಡಲಾಗಿರುತ್ತದೆ."**

23) ಈ ರೀತಿ ನುಡಿದಿರುವುದನ್ನು ಪರಿಶೀಲಿಸಿದಾಗ, ಈ ಮೀನು ಸಾಕಾಣಿಕಾ ಹೊಂಡದ ಕಾಮಗಾರಿಗೆ ಸಂಬಂದಪಟ್ಟಂತೆ ಹಣಪಾವತಿಸುವಲ್ಲಿ ವಿಳಂಬವಾಗಿರುವ ಬಗ್ಗೆ ಸ್ಪಷ್ಟವಾಗಿ ಹೇಳಿರುತ್ತಾರೆ. ಅಲ್ಲದೆ ಈ ಬಗ್ಗೆ ಸ್ಥಳೀಯ ಪಂಚಾಯಿತಿಯ ಪಿಡಿಓ ರವರಾದ ಆಸನೌ ಮತ್ತು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗೆ ಎಚ್ಚರಿಕೆ ನೀಡಿರುವುದೂ ಸಹ ಕಂಡು ಬರುತ್ತದೆ. ದೂರುದಾರರ ಸಾಕ್ಷ್ಯ ಮತ್ತು ಪಿ.ಡಬ್ಲ್ಯು–2 ರವರ ಮೌಖಿಕ ಸಾಕ್ಷ್ಯವನ್ನು ಮತ್ತು ನಿಪಿ–6 ರ ತನಿಖಾ ವರದಿಯನ್ನು ಪರಿಶೀಲಿಸಿದಾಗ ಕಾಮಗಾರಿ ಆಗಿದ್ದರೂ ಸಹಾ ಆ ಕಾಮಗಾರಿಗೆ ಸಂಬಂದಪಟ್ಟಂತೆ ಹಣ ಬಿಡುಗಡೆಯಾಗಿರುವುದಿಲ್ಲವೆಂಬುದು ಕಂಡು ಬರುತ್ತದೆ. ಮುಂದುವರೆದು, ಆಸನೌರವರು ಈ ಹಿಂದೆ ಸಲ್ಲಿಸಿದ ಆಕ್ಷೇಪಣೆಯಲ್ಲಿ ತನಗೆ ಅಧಿಕ ಕೆಲಸದ ಒತ್ತಡದಿಂದ ಮತ್ತು

ಆಗಿರುವ ತಾಂತ್ರಿಕ ದೋಷದಿಂದ ಗಮನಿಸಲಾಗಲಿಲ್ಲವೆಂದು ಹೇಳಿದ್ದು, ಸದರಿ ತಾಂತ್ರಿಕ ದೋಷ ಯಾವ ಕಾರಣದಿಂದ ಉಂಟಾಗಿರುತ್ತದೆ ಎಂಬ ಬಗ್ಗೆ ಸೂಕ್ತ ಸಮಜಾಯಿಷಿ ನೀಡಿರುವುದಿಲ್ಲ ಎಂಬ ಬಗ್ಗೆಯೂ ಸಹ ದೋಷಾರೋಪ ರಚಿಸಲಾಗಿರುತ್ತದೆ.

24) ಈ ವಿಚಾರಣೆಯಲ್ಲಿ ರಚಿಸಲಾಗಿರುವ 3 ಆರೋಪಗಳ ಪೈಕಿ ಆಸನೌರವರು ಸ್ವತ: ಡಿ.ಡಬ್ಲ್ಯು–1 ಎಂದು ಮೌಖಿಕ ಸಾಕ್ಷ್ಯ ನುಡಿದಿದ್ದು, ತನ್ನ ಮೌಖಿಕ ಸಾಕ್ಷ್ಯದ ಮುಖ್ಯ ವಿಚಾರಣೆಯಲ್ಲಿ ದೂರುದಾರರು ಈ ಕಾಮಗಾರಿಯನ್ನು ಪೂರ್ಣಗೊಳಿಸದೆ, ಅಂದಾಜು ಮೊತ್ತದ ಪೂರ್ಣಪ್ರಮಾಣದ ಬಿಲ್ ಪಾವತಿಸಲು ಒತ್ತಡ ನೀಡಿರುತ್ತಾರೆಂದು ಹೇಳಿರುತ್ತಾರೆ. ಆದರೆ, ಈ ಸಂಗತಿಗೆ ಪೂರಕವಾಗುವಂತೆ ಯಾವುದೇ ಪೂರಕ ಸಾಕ್ಷ್ಯ ನೀಡಿರುವುದಿಲ್ಲ. ತನಿಖಾಧಿಕಾರಿ ಮತ್ತು ಆಸನೌರವರ ಮೇಲಾಧಿಕಾರಿಯಾದ ರಾಮನಗರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ನೀಡಿರುವ ವರದಿ ಮತ್ತು ಮೌಖಿಕ ಸಾಕ್ಷ್ಯದಲ್ಲಿ, ಈ ಮೀನು ಸಾಕಾಣಿಕಾ ಹೊಂಡ ನಿರ್ಮಿಸಲು ಆಗಿರುವ ಕಾಮಗಾರಿಗೆ ಹಣ ಪಾವತಿಸಲು ವಿಳಂಬವಾಗಿರುವುದು ಕಂಡು ಬಂದಿರುತ್ತದೆ ಎಂದು ಸ್ಪಷ್ಟವಾಗಿ ನುಡಿದಿರುವುದಲ್ಲದೆ, ಈ ಬಗ್ಗೆ ಆಸನೌರವರಿಗೆ ಎಚ್ಚರಿಕೆ ನೀಡಿರುವುದೂ ಸಹ ಕಂಡು ಬಂದಿರುತ್ತದೆ. ಈ ಬಗ್ಗೆ ಆಸನೌರವರು ನಿಡಿ.1 ರಿಂದ 16 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಆದರೆ ಇವರು ತಮ್ಮ ಪಾಟೀ ಸವಾಲಿನಲ್ಲಿ ಮಂಡನಾಧಿಕಾರಿಗಳು ಪ್ರಶ್ನಿಸಿದಾಗ ಈ ಕೆಳಕಂಡಂತೆ ಉತ್ತರಿಸಿರುತ್ತಾರೆ.

**"ದೂರುದಾರರು ತಮ್ಮ ಮೀನಿನ ನೀರಿನ ತೊಟ್ಟಿ ಭಾಗಶ: ಪೂರ್ಣಮಾಡಿ ಅದಕ್ಕೆ ಸಂಬಂದಪಟ್ಟ ದಾಖಲೆಗಳನ್ನು ನೀಡಿದ್ದಾಗಿಯೂ ಹಣ ಪಾವತಿಸುವಂತೆ ವಿನಂತಿಸಿದ್ದಾಗಿಯೂ, ನಾನು ಹಣ ಪಾವತಿಸಲು ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಇಂಜಿನಿಯರರವರು ಬಿಲ್ ನೀಡಿರಲಿಲ್ಲವಾದ್ದರಿಂದ ಹಣ ಪಾವತಿಸಲು ಸಾಧ್ಯವಾಗಿರುವುದಿಲ್ಲವೆಂದು ಹೇಳಿರುತ್ತಾರೆ."**

**"ನಾನು ಹಣ ಪಾವತಿಸುವಲ್ಲಿ ವಿಳಂಬ ಮಾಡಿದ್ದರಿಂದಲೆ, ದೂರುದಾರರು ಈ ದೂರು ದಾಖಲಿಸಿರುತ್ತಾರೆ ಎಂದರೆ ಸರಿ.**

**"ತಾಂತ್ರಿಕದೋಷದಿಂದ ಮತ್ತು ಕೆಲಸದ ಒತ್ತಡದಿಂದ ಕಡತವನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲವೆಂದು ನನ್ನ ಆಕ್ಷೇಪಣೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ."**

**" ನಾನು ಈ ಲೋಕಾಯುಕ್ತ ಸಂಸ್ಥೆಗೆ ಆಕ್ಷೇಪಣೆ ಸಲ್ಲಿಸುವಾಗ ಯಾವ ರೀತಿಯ ತಾಂತ್ರಿಕ ದೋಷ ಉಂಟಾಗಿರುತ್ತದೆ ಎಂದು ವಿವರವಾಗಿ ಸಮಜಾಯಿಷಿ ನೀಡಿರುವುದಿಲ್ಲವೆಂದರೆ ಸರಿ"**

25) ಈ ಮೇಲ್ಕಂಡಂತೆ ಆಸನೌರವರು ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿರುವುದನ್ನು ಪರಿಶೀಲಿಸಿದಾಗ, ತಾನು ದೂರುದಾರರ ಮೀನಿನ ನೀರಿನ ತೊಟ್ಟಿ ಕಾಮಗಾರಿಗೆ ಸಂಬಂದಪಟ್ಟ ಭಾಗಶ: ಪೂರ್ಣಗೊಳಿಸಿದ ಕಾಮಗಾರಿಗೆ ಹಣ ಪಾವತಿ ಮಾಡಿರುವುದಿಲ್ಲವೆಂಬುದು ಕಂಡು ಬರುತ್ತದೆ. ಆದರೆ, ಈ ಆಸನೌರವರು, ಇಂಜಿನಿಯರ್ ರವರು ಬಿಲ್ ನೀಡಿರಲಿಲ್ಲವಾದ್ದರಿಂದ ಹಣ ಪಾವತಿಸಲು ಸಾಧ್ಯವಾಗಿರುವುದಿಲ್ಲವೆಂದು ಹೇಳಿರುವುದು ಒಪ್ಪಲು ಸಾಧ್ಯವಿಲ್ಲ. ಅದೇ ಪ್ರಕಾರ, ಈ ಆಸನೌರವರು ತಾಂತ್ರಿಕ ದೊಷದಿಂದ ಮತ್ತು ಕೆಲಸದ ಒತ್ತಡದಿಂದ ಕಡತವನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲವೆಂದು ಹೇಳಿರುವುದನ್ನು ಸಹಾ ಒಪ್ಪಿಕೊಂಡಿರುತ್ತಾರೆ. ಆಸನೌರವರು ಜವಾಬ್ದಾರಿಯುತ ಸಾರ್ವಜನಿಕ ಅಧಿಕಾರಿಯಾಗಿದ್ದು, ಅಧಿಕ ಕೆಲಸದ ಒತ್ತಡದಿಂದ ಮತ್ತು ತಾಂತ್ರಿಕ ದೋಷದಿಂದ ಗಮನಿಸಲು ಸಾಧ್ಯವಾಗಿರುವುದಿಲ್ಲ ಎಂದು ಹೇಳಿರುವುದೂ ಸಹ ಒಪ್ಪಲು ಬಾರದ್ದಾಗಿರುತ್ತದೆ. ಅಲ್ಲದೆ, ತಮ್ಮ ಆಕ್ಷೇಪಣೆಯಲ್ಲಿ ಯಾವ ರೀತಿಯ ತಾಂತ್ರಿಕ ದೋಷದಿಂದ ಹಣ ಪಾವತಿ ಆಗಿಲ್ಲ ಎಂಬ ಬಗ್ಗೆಯೂ ಸಹ ವಿವರವಾದ ಸಮಜಾಯಿಷಿಯನ್ನು ಈ ಲೋಕಾಯುಕ್ತ ಸಂಸ್ಥೆಗೆ ನೀಡಿರಲಿಲ್ಲವೆಂಬೂದೂ ಸಹ ನಿಜವೆಂದು ಒಪ್ಪಿಕೊಂಡಿರತ್ತಾರೆ.

26) ಈ ಎಲ್ಲಾ ಅಂಶವನ್ನು ಪರಿಶೀಲಿಸಲಾಗಿ ಈ ಆಸನೌರವರು ದಿನಾಂಕ 23/4/2015 ರಂದು ರಾಮನಗರ ತಾಲ್ಲೂಕಿನ ಎಂ.ಗೋಪಹಳ್ಳಿ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ದಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುವಾಗ ದುರ್ನಡತೆ ತೋರಿ ಕರ್ತವ್ಯ ಲೋಪ ಎಸಗಿರುವುದು ರುಜುವಾತಾಗುತ್ತದೆ. ಆಸನೌರವರ ಮೇಲಾಧಿಕಾರಿ ಮತ್ತು ತನಿಖಾಧಿಕಾರಿಯಾದ ಪಿ.ಡಬ್ಲ್ಯು-2 ರವರು ತನಿಖಾ ಕಾಲದಲ್ಲಿಯೇ ಕರ್ತವ್ಯಲೋಪ ಕಂಡು ಬಂದಿದ್ದರಿಂದ ಎಚ್ಚರಿಕೆ ನೀಡಿರುವುದೂ ಸಹ ದಾಖಲೆಗಳಿಂದ ಕಂಡು ಬರುತ್ತದೆ. ಆಸನೌರವರ ಪರ ವಕೀಲರ ವಾದವನ್ನು ಒಪ್ಪಲು ಸಾಧ್ಯವಾಗುವುದಿಲ್ಲ.

25) ಈ ಎಲ್ಲಾ ಕಾರಣದಿಂದ, ಶಿಸ್ತು ಪ್ರಾಧಿಕಾರದವರು ಆ.ಸ.ನೌ.ರವರ ಮೇಲೆ ಹೊರಿಸಲಾದ ದುರ್ನಡತೆ ಮತ್ತು ಕರ್ತವ್ಯ ಲೋಪಗಳನ್ನು ರುಜುವಾತು ಪಡಿಸುವಲ್ಲಿ ಯಶಸ್ವಿಯಾಗಿರುತ್ತಾರೆ ಎಂದು

ನಿರ್ಣಯಿಸಲಾಗಿದೆ. ಅದೇ ಪ್ರಕಾರ, ಶಿಸ್ತು ಪ್ರಾಧಿಕಾರದವರು ನೀಡಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಾಧಾರಗಳು ಆ.ಸ.ನೌ.ರವರು ಮೇಲ್ಕಂಡ ಕರ್ತವ್ಯಲೋಪ ಮತ್ತು ದುರ್ನಡತೆ ಎಸಗಿರುವ ಹೆಚ್ಚಿನ **ಸಂಭವನೀಯತೆ**(probabilities) ಕಂಡು ಬರುತ್ತದೆ. ಈ ಎಲ್ಲಾ ಕಾರಣಗಳಿಂದ **ಅಂಶ–1ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಂಶ–2:** ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

*ಶಿಸ್ತು ಪ್ರಾಧಿಕಾರದವರು ಆ.ಸ.ನೌ ರವರಾದ* ಶ್ರೀಮತಿ ಆರ್.ಎಂ.ಕಲಾವತಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಎಂ.ಗೋಪಳ್ಳಿ ಪಂಚಾಯಿತಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ *ರವರ ವಿರುದ್ಧ ಹೊರಿಸಲಾದ ಆಪಾದನೆಗಳನ್ನು* ***ರುಜುವಾತು*** *ಪಡಿಸಲಾಗಿದೆ ಎಂದು ನಿರ್ಣಯಿಸಲಾಗಿದೆ.*

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–2ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

10ನೇ ಡಿಸೆಂಬರ್ 2019

10/12/19

(ಸಲ್ವ ಕುಮಾರ್.ಸಿ)
ಅಪರ ನಿಬಂಧಕರು ವಿಚಾರಣೆಗಳು–16,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.